

بِسْمِ اللهِ الرَّحْمَنِ الرَّحِيم

# ಪ್ರಾರ್ಥನೆ ಅಂಗೀಕಾರದ ರಹಸ್ಯ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ 17–06–2016 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

وَإِذَا سَأَلَكَ عِبَادِي عَنِّي فَإِنِّي قَرِيبٌ أُجِيبُ دَعْوَةَ الدَّاعِ
إِذَا دَعَانِي فَلْيَسْتَجِيبُوا لِي وَلْيُؤْمِنُوا بِي لَعَلَّهُمْ يَرْشُدُونَ

(ಓ ಪ್ರವಾದಿ,) ನನ್ನ ಬಗ್ಗೆ ನನ್ನ ದಾಸರು ನಿನ್ನೊಡನೆ ಕೇಳಿದರೆ (ಹೇಳು)– ಖಂಡಿತವಾಗಿಯೂ ನಾನು ಸಮೀಪದಲ್ಲೇ ಇದ್ದೇನೆ. ನನ್ನನ್ನು ಕರೆದು ಪ್ರಾರ್ಥಿಸುವಾಗ ಪ್ರಾರ್ಥಿಸುವವನ ಪ್ರಾರ್ಥನೆಗೆ ನಾನು ಉತ್ತರ ನೀಡುವೆನು. ಆದ್ದರಿಂದ ಅವರು ಸತ್ಪಥವನ್ನು ಪಡೆಯಲಿಕ್ಕಾಗಿ ನನ್ನ ಕರೆಗೆ ಓಗೊಡಲಿ ಮತ್ತು ನನ್ನ ಮೇಲೆ ನಂಬಿಕೆ ಇರಿಸಲಿ.

(ಪವಿತ್ರ ಖುರ್‌ಆನ್ 2: 187)

ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಉಪವಾಸ ಅನುಷ್ಠಿಸುವ ಆಜ್ಞೆ, ಅದಕ್ಕೆ ಸಂಬಂಧಿಸಿದ ಶರತ್ತುಗಳು ಮತ್ತು ಅದಕ್ಕೆ ಸಂಬಂಧಿಸಿದ ಇತರ ಆಜ್ಞೆಗಳು ಇವುಗಳ ಮಧ್ಯದಲ್ಲಿ ಈ ವಚನ ಇರಿಸಿ ರಮಝಾನ್ ತಿಂಗಳಲ್ಲಿ ಪ್ರಾರ್ಥನೆಗಳು ಅಂಗೀಕರಿಸಲ್ಪಡುವುದರ ವೈಶಿಷ್ಟ್ಯತೆ ಬಗ್ಗೆ ಗಮನ ಹರಿಸಿದ್ದಾನೆ. ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್ ರಝಿಯಲ್ಲಾಹು ಅನ್‌ಹು ಈ ಸಂಬಂಧದ ಬಗ್ಗೆ ಹೀಗೆ ಹೇಳಿದ್ದಾರೆ: ಉಪವಾಸದ ಅನುಷ್ಠಾನ ತಖ್ವವನ್ನು ಗಳಿಸುವ ಮಾರ್ಗವಾಗಿರುವ ಹಾಗೆಯೇ ಅಲ್ಲಾಹನ ಸಾಮೀಪ್ಯ ಗಳಿಸುವ ಮಾರ್ಗವೂ ಆಗಿದೆ. ಆದುದರಿಂದ ರಮಝಾನ್ ತಿಂಗಳಲ್ಲಿ ತಖ್ವವನ್ನು ಕಲಿಯಲು, ತಖ್ವದಿಂದ ಕೂಡಿದ ಜೀವಿತ ನಡೆಸಲು ಮತ್ತು ಅಲ್ಲಾಹನ ಸಾಮೀಪ್ಯಗಳಿಸಲು ಪ್ರಯತ್ನವನ್ನು ಮಾಡುವುದಿಲ್ಲವಾದರೆ ರಮಝಾನ್ ತಿಂಗಳು ಪ್ರಾರ್ಥನೆಗಳು ಅಂಗೀಕರಿಸಲ್ಪಡುವ ತಿಂಗಳಾಗಿ ಪರಿಣಮಿಸಲಾರದು. ರಮಝಾನ್ ತಿಂಗಳಲ್ಲಿ ಅಲ್ಲಾಹನೊಂದಿಗೆ ಸ್ಥಾಪಿತವಾದ ಮನುಷ್ಯನ ಸಂಬಂಧ ಕೇವಲ ರಮಝಾನ್ ತಿಂಗಳಿಗೆ ಮಾತ್ರ ಸೀಮಿತವಾಗಲಾರದು. ಸ್ಥಿರವಾದ ಬದಲಾವಣೆಗಳ ಪ್ರಭಾವಗಳು ಪ್ರಕಟವಾಗುವುವು. ಅಲ್ಲಾಹನು ಪವಿತ್ರ ಖುರ್‌ಆನಿನ ಈ ವಚನದಲ್ಲಿ ಹೇಳುತ್ತಾನೆ "ನಾನು ಸಮೀಪದಲ್ಲೇ ಇದ್ದೇನೆ." ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ: ಈ ತಿಂಗಳಲ್ಲಿ ಶೈತಾನನು ಸಂಕೋಲೆಗಳಿಂದ ಬಂಧಿಸಲ್ಪಡುತ್ತಾನೆ ಮತ್ತು ಅಲ್ಲಾಹನು ಈ ತಿಂಗಳಲ್ಲಿ ಸಮೀಪಕ್ಕೆ ಬರುತ್ತಾನೆಂದು. ಆದರೆ ಅಲ್ಲಾಹನು ಯಾವ ಜನರ ಸಮೀಪಕ್ಕೆ ಬರುತ್ತಾನೆ? ಅಲ್ಲಾಹನ ಸಾಮೀಪ್ಯ ಗಳಿಸಿದ ಅನುಭವ ಹೊಂದುವವರ ಸಮೀಪಕ್ಕೆ ಬರುತ್ತಾನೆ. ಅಥವಾ ಅಲ್ಲಾಹನ ಸಾಮೀಪ್ಯ ಗಳಿಸಲು ಇಚ್ಛಿಸಿ ಅವನ ಆಜ್ಞೆಗಳನ್ನು ಪಾಲಿಸುವವರ ಸಮೀಪಕ್ಕೆ ಬರುತ್ತಾನೆ.

ಅಲ್ಲಾಹನು ಹೇಳುತ್ತಾನೆ: **ಫಲ್ ಯಸ್ತ ಜೀಬೂಲೀ.** ಅವರು ನನ್ನ ಕರೆಗೆ ಓಗೊಡಲಿ. ಅಲ್ಲಾಹನ ಆಜ್ಞೆಗಳನ್ನು ತಿಳಿದುಕೊಂಡು ಅವುಗಳನ್ನು ಅನುಷ್ಠಾನಕ್ಕೆ ತರಲು ಲಬ್ಬೈಕ್ ಹೇಳುತ್ತಾ ನಿನ್ನ ಕರೆಗೆ ನಾವು ಓಗೊಡುತ್ತೇವೆ ಎಂದು ಅವರು ಹೇಳುತ್ತಾರೆ. ಅಲ್ಲಾಹನು ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಹೊಂದಿದವನೆಂದು ಅವರು ದೃಢವಾಗಿ ನಂಬುತ್ತಾರೆ. ನಾನು ಅಲ್ಲಾಹನ ಆಜ್ಞೆಗಳನ್ನು ಅನುಷ್ಠಾನಕ್ಕೆ ತಂದು ಅವನನ್ನು ನಿಷ್ಠಾಪೂರ್ಣವಾಗಿ ಬೇಡಿಕೊಂಡರೆ ನನ್ನ ಪ್ರಾರ್ಥನೆಗಳು ಅಂಗೀಕರಿಸಲ್ಪಡುವುವು ಎಂದು ಅವರು ನಂಬುತ್ತಾರೆ.

ಆದುದರಿಂದ, ನಾವು ಪ್ರಾರ್ಥಿಸುತ್ತೇವೆ ಆದರೆ ನಮ್ಮ ಪ್ರಾರ್ಥನೆಗಳು ಅಂಗೀಕರಿಸಲ್ಪಡುವುದಿಲ್ಲ ಎಂದು ಹೇಳುವವರು ತಮ್ಮನ್ನು ಪರಿಶೋಧಿಸಬೇಕು. ನಾವು ಅಲ್ಲಾಹನ ಆಜ್ಞೆಗಳನ್ನು ಎಷ್ಟರಮಟ್ಟಿಗೆ ಪಾಲಿಸುತ್ತೇವೆ ಎಂದು ನೋಡಬೇಕು. ನಮ್ಮ ಕರ್ಮಗಳು ಸರಿಯಿಲ್ಲದಿದ್ದರೆ, ಹಾಗೂ ನಮ್ಮ ವಿಶ್ವಾಸ ಕೇವಲ ಒಂದು ಆಚಾರ ರೂಪದಲ್ಲಿದ್ದರೆ, ನಾವು 'ಅಲ್ಲಾಹನನ್ನು ಬೇಡಿಕೊಂಡೆವು ಆದರೆ ನಮ್ಮ ಪ್ರಾರ್ಥನೆಗಳು ಅಂಗೀಕರಿಸಲ್ಪಡಲಿಲ್ಲ' ಎಂದು ಹೇಳುವುದು ತಪ್ಪಾದ ಮಾತಾಗಿದೆ.

ಪ್ರಾರ್ಥನೆಗಳು ಅಂಗೀಕರಿಸಲ್ಪಡುವಂತಾಗಲು ಅಲ್ಲಾಹನು ಯಾವ ಶರತ್ತುಗಳನ್ನು ವಿಧಿಸಿದ್ದಾನೆ ಎನ್ನುವುದರ ಬಗ್ಗೆ ವಿವರಣೆ ನೀಡುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಜನರು ತಖ್ವ ಮತ್ತು ದೇವಭಯವನ್ನು ತಮ್ಮಲ್ಲಿ ಸೃಷ್ಟಿಸಿಕೊಂಡು ತಾನು ಅವರ ಬೇಡಿಕೆಗಳನ್ನು ಆಲಿಸುವಂತೆ ಮಾಡಬೇಕು ಎಂದು ಅಲ್ಲಾಹನು ಬಯಸುತ್ತಾನೆ. ತಖ್ವವನ್ನು ಹೊಂದಿ ಅಲ್ಲಾಹನ ಬಗ್ಗೆ ಭಯಭೀತಿಯನ್ನು ಹೊಂದಿದರೆ ಅಲ್ಲಾಹನು ನಮ್ಮ ಪ್ರಾರ್ಥನೆಗಳನ್ನು ಆಲಿಸುತ್ತಾನೆ. ಅಲ್ಲಾಹನು ಹೇಳಿದ ಎರಡನೆಯ ಶರತ್ತು ನನ್ನ ಮೇಲೆ ಅವರು ನಂಬಿಕೆ ಇರಿಸಬೇಕು ಎಂದಾಗಿದೆ. ಆದರೆ ಈ ನಂಬಿಕೆ ಹೇಗೆ ಇರಿಸುವುದು? ಅಲ್ಲಾಹನು ಇದ್ದಾನೆಂದೂ ಅವನು ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ಹೊಂದಿರುವನೆಂದೂ ನಂಬಬೇಕು. ಈಮಾನ್ ಬಿಲ್ ಗೈಬ್ (ಅದೃಶ್ಯ ವಿಚಾರಗಳಲ್ಲಿ ನಂಬಿಕೆ) ಹೊಂದಿದರೆ ಅಲ್ಲಾಹನಿಂದ ಎಂತಹ ಜ್ಞಾನ ಲಭಿಸುವುದೆಂದರೆ ಅಲ್ಲಾಹನ ಅಸ್ತಿತ್ವದ ಬಗ್ಗೆ, ಅವನು ಸರ್ವಶಕ್ತಿಗಳ ಒಡೆಯನಾಗಿರುವ ಬಗ್ಗೆ ಜ್ಞಾನ ಲಭಿಸುವುದರೊಂದಿಗೆ ಪ್ರಾರ್ಥನೆಗಳು ಅಂಗೀಕರಿಸಲ್ಪಡುವ ಅನುಭವವೂ ಲಭಿಸುವುದು. ಮೊದಲನೆಯದಾಗಿ ಮನುಷ್ಯನು ತನ್ನ ವಿಶ್ವಾಸವನ್ನು ಬಲಪಡಿಸಬೇಕು. ಆಗ ಅಲ್ಲಾಹನು ಹೆಜ್ಜೆ ಹಾಕುತ್ತಾನೆ. ತನ್ನ ಬಗ್ಗೆ ಸಾಕ್ಷ್ಯಾಧಾರ ಸಹ ನೀಡುತ್ತಾನೆ.

ಪ್ರಾಥನೆಗಳು ಅಂಗೀಕರಿಸಲ್ಪಡಲಿರುವ ಶರತ್ತುಗಳು, ಅದರ ತತ್ವಗಳು, ಅದರ ದಾರ್ಶನಿಕ ವಿವರಣೆ ಮೊದಲಾದುವುಗಳ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವಿಧ ಸಂದರ್ಭಗಳಲ್ಲಿ ಸವಿಸ್ತಾರವಾಗಿ ವಿವರಣೆ ನೀಡಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸತ್ಯವಾದ ವಿಷಯವೇನೆಂದರೆ ಕರ್ಮಗಳನ್ನು ಸರಿಪಡಿಸದೆ ಪ್ರಾರ್ಥನೆ ಮಾಡುವವನು ಪ್ರಾರ್ಥನೆ ಮಾಡುವುದಲ್ಲ, ಅವನು ಅಲ್ಲಾಹನನ್ನು ಪರೀಕ್ಷಿಸುತ್ತಾನೆ. ಆದುದರಿಂದ ಪ್ರಾರ್ಥನೆ ಮಾಡುವ ಮೊದಲು ನಮ್ಮ ಎಲ್ಲ ಶಕ್ತಿ ಸಾಮರ್ಥ್ಯಗಳನ್ನು ವಿನಿಯೋಗಿಸಬೇಕಾದುದು ಆವಶ್ಯಕವಾಗಿದೆ. ಮೊದಲು ಮನುಷ್ಯನು ತನ್ನ ನಂಬಿಕೆಗಳನ್ನು ಮತ್ತು ಕರ್ಮಗಳನ್ನು ನೋಡಿಕೊಳ್ಳಬೇಕು. ಅಲ್ಲಾಹನು ಮಾಡುವ ಪರಿವರ್ತನೆ ಸಾಮಗ್ರಿಗಳ ಬಳಕೆಗೆ ಅನುಸಾರವಾಗಿರುತ್ತದೆ. ಅವನು ಪರಿವರ್ತನೆಗೆ ಯಾವುದಾದರೊಂದು ಸಾಮಗ್ರಿಯನ್ನು ಇಟ್ಟಿರುತ್ತಾನೆ. ನಾವು ಪ್ರಾರ್ಥಿಸಿದ್ದೇವೆ ಅವುಗಳನ್ನು ಈಡೇರಿಸುವ ಸಾಮಗ್ರಿಗಳು ಏಕೆ ಎಂದು ಹೇಳುವವರು ಇದರ ಬಗ್ಗೆ ಚಿಂತಿಸಬೇಕಾಗಿದೆ.

**ಇಯ್ಯಾಕನಸ್ತಈನ್** (ನಾವು ನಿನ್ನಿಂದ ಮಾತ್ರ ಸಹಾಯವನ್ನು ಯಾಚಿಸುತ್ತೇವೆ) ಎಂದು ಪ್ರಾರ್ಥಿಸುವ ಮೊದಲು **ಇಯ್ಯಾಕನಅ್‌ಬುದು** (ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ) ಎಂದು ಪ್ರಾರ್ಥಿಸಲು ಕಲಿಸಿರುವುದು ಇದನ್ನು ವಿಶಿಷ್ಟವಾಗಿ ವ್ಯಾಖ್ಯಾನಿಸುತ್ತದೆ. ನೀವು ಅಲ್ಲಾಹನ ನಡೆವಳಿಕೆಗಳನ್ನು ನೋಡುವುದಾದರೆ ಅವನು ಸಾಮಗ್ರಿಗಳನ್ನು ಸೃಷ್ಟಿಸಿರುತ್ತಾನೆ ಎಂದು ಕಾಣಬಹುದು. ನೀವು ನೋಡಿರಿ, ದಾಹವನ್ನು ನಿವಾರಿಸಲು ನೀರನ್ನು ಅವನು ಸೃಷ್ಟಿಸಿದ್ದಾನೆ. ಹಸಿವನ್ನು ನಿವಾರಿಸಲು ಆಹಾರವನ್ನು ಸೃಷ್ಟಿಸಿದ್ದಾನೆ. ಸಾಮಗ್ರಿಗಳ ಸೃಷ್ಟಿ ಜಾರಿಯಲ್ಲಿದೆ.

ಅಲ್ಲಾಹನ ಎರಡು ಹೆಸರುಗಳು ಇದನ್ನೇ ಸೂಚಿಸುತ್ತವೆ. ಅಲ್ಲಾಹನ ಬಗ್ಗೆ **ಕಾನಲ್ಲಾಹು ಅಲೀಮನ್ ಹಕೀಮ** ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. **ಅಲೀಮ್** ಎಂದರೆ ಪ್ರತಿಯೊಂದು ಕೆಲಸ ಮಾಡಲು ಸಾಮರ್ಥ್ಯವುಳ್ಳವನು. **ಹಕೀಮ್** ಎಂದರೆ ಪ್ರತಿಯೊಂದು ಕೆಲಸವನ್ನು ಜಾಣ್ಮೆಯಿಂದ, ಸಂದರ್ಭ ಮತ್ತು ಸ್ಥಳಕ್ಕೆ ಅನುಸಾರವಾಗಿ, ಅನುಯೋಜ್ಯವಾಗಿಯೂ ಸಮರ್ಪಕವಾಗಿಯೂ ಮಾಡುವವನು. ನೋಡಿರಿ, ಅಲ್ಲಾಹನು ಗಿಡ ಮೂಲಿಕೆಗಳಲ್ಲಿ ವಿವಿಧ ರೀತಿಯ ವೈಶಿಷ್ಟ್ಯಗಳನ್ನು ಇರಿಸಿದ್ದಾನೆ. 'ತರ್‌ಬದ್' ಎಂಬ ಗಿಡಮೂಲಿಕೆಯನ್ನು ನೋಡಿರಿ. ಒಂದೆರಡು ತೊಲಗಳಷ್ಟು ತಿಂದರೆ ವಿಸರ್ಜನೆಗೆ ಸಹಾಯಕವಾಗುತ್ತದೆ. 'ಸಕ್‌ಮೋನಿಯಾ' ಎಂಬ ಗಿಡಮೂಲಿಕೆ ಸಹ ಇದೇರೀತಿಯದ್ದಾಗಿದೆ. ನೀರಿನ ಸಹಾಯವಿಲ್ಲದೆ ದಾಹವನ್ನು ನಿವಾರಿಸಲು ಅಲ್ಲಾಹನಿಗೆ ಸಾಧ್ಯವಿದೆ. ಆದರೆ ಅಲ್ಲಾಹನು ತನ್ನ ಅದ್ಭುತ ಶಕ್ತಿ ಸಾಮರ್ಥ್ಯಗಳ ಜ್ಞಾನವನ್ನು ನೀಡಲು ಬಯಸುತ್ತಾನೆ. ಅಲ್ಲಾಹನ ಶಕ್ತಿ ಸಾಮರ್ಥ್ಯಗಳ ಬಗ್ಗೆ ಜ್ಞಾನ ಅವನ ಸೃಷ್ಟಿಗಳ ಅದ್ಭುತಗಳ ಅರಿವು ವಿಶಾಲಗೊಳ್ಳುವಾಗ ಅಲ್ಲಾಹನ ಗುಣವಿಶೇಷಗಳ ಬಗ್ಗೆ ಅರಿವು ವರ್ಧಿಸುತ್ತದೆ ಮತ್ತು ಅಲ್ಲಾಹನ ಸಾಮೀಪ್ಯ ಗಳಿಸುವ ಅರ್ಹತೆ ಮನುಷ್ಯನು ಗಳಿಸುತ್ತಾನೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಬೇಡಿಕೊಳ್ಳುವುದು ಮನುಷ್ಯನ ವೈಶಿಷ್ಟ್ಯವಾಗಿದೆ. ಉತ್ತರ ಕೊಡುವುದು ಅಲ್ಲಾಹನ ವೈಶಿಷ್ಟ್ಯವಾಗಿದೆ. ಇದನ್ನು ಮನವರಿಕೆ ಮಾಡಿಕೊಳ್ಳದವನು ಮತ್ತು ನಂಬದವನು ತಪ್ಪುಗಾರನಾಗುತ್ತಾನೆ. **ರಹ್ಮಾನಿಯ್ಯತ್** ಮತ್ತು **ರಹೀಮಿಯ್ಯತ್** ಬೇರೆ ಬೇರೆಯಲ್ಲ. ಒಂದನ್ನು ಬಿಟ್ಟು ಇನ್ನೊಂದನ್ನು ಇಚ್ಛಿಸುವವನಿಗೆ ಅದು ದೊರಕಲಾರದು. **ರಹ್ಮಾನಿಯ್ಯತ್** ಆವಶ್ಯಪಡುವುದೇನೆಂದರೆ ನಾವು **ರಹೀಮಿಯ್ಯತ್ತಿನ** ಅನುಗ್ರಹ ಪಡೆಯುವ ಶಕ್ತಿಯನ್ನು ನಮ್ಮಲ್ಲಿ ಸೃಷ್ಟಿಸಬೇಕೆಂದು. ಹೀಗೆ ಮಾಡದವನು ಅನುಗ್ರಹಗಳಿಗೆ ಕೃತಘ್ನನಾದವನು ಆಗುತ್ತಾನೆ. **ಇಯ್ಯಾಕನಅ್‌ಬುದು** ಎಂಬುದರ ಅರ್ಥ ನಾವು ನಿನ್ನನ್ನು ಆರಾಧಿಸುತ್ತೇವೆ ಎಂದಾಗಿದೆ. ನೀನು ದಯಪಾಲಿಸಿದ ಭೌತಿಕ ಸಾಮಗ್ರಿಗಳನ್ನು ನಾವು ಉಪಯೋಗಿಸುತ್ತೇವೆ ಎಂದಾಗಿದೆ. ನೋಡಿರಿ, ನಾಲಗೆ ಮಾಂಸಪೇಶಿಗಳಿಂದ ಸೃಷ್ಟಿಸಲ್ಪಟ್ಟಿದೆ. ಹೀಗೆ ಸೃಷ್ಟಿಸಲ್ಪಡದಿದ್ದರೆ ನಮಗೆ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ಇದೇ ನಾಲಗೆಯನ್ನು ಪ್ರಾರ್ಥಿಸಲು ನಮಗೆ ದಯಪಾಲಿಸಲಾಗಿದೆ. ಅದು ಹೃದಯದ ಯೋಚನೆಗಳನ್ನು ಪ್ರಕಟಿಸುತ್ತದೆ. ನಾವು ಪ್ರಾರ್ಥನೆಗೆ ನಾಲಗೆಯನ್ನು ಎಂದೂ ಬಳಸದಿದ್ದರೆ ಅದು ನಮ್ಮ ಅಹಂಭಾವವಾಗಿದೆ. ಕೆಲವು ರೋಗಗಳು ಹೇಗಿವೆ ಎಂದರೆ ಅವು ನಾಲಗೆಯನ್ನು ಬಾಧಿಸಿದರೆ ನಾಲಗೆ ತನ್ನ ಕೆಲಸ ಬಿಟ್ಟು ಬಿಡುತ್ತದೆ. ಆಗ ಮನುಷ್ಯನು ಮೂಗನಾಗುತ್ತಾನೆ. ನಮಗೆ ನಾಲಗೆ ನೀಡಿದುದು ಎಂತಹ ಅನುಗ್ರಹವಾಗಿದೆ. ಇದೇ ರೀತಿ ಕಿವಿಯಲ್ಲಿ ಏನಾದರೂ ದೋಷ ಉಂಟಾದರೆ ಏನೂ ಕೇಳಿಸಲಾರದು. ಹೃದಯದಲ್ಲಿ ಆರ್ದ್ರತೆ ಇರಿಸಲಾಗಿದೆ. ಯೋಚಿಸುವ ಶಕ್ತಿ ಇರಿಸಲಾಗಿದೆ. ರೋಗಬಾಧಿತವಾದರೆ ಅವೆಲ್ಲ ನಿಷ್ಕ್ರಿಯವಾಗಿಬಿಡುತ್ತವೆ. ನೀವು ಹುಚ್ಚರನ್ನು ನೋಡಿರಿ. ಅವರ ಶಕ್ತಿಗಳು ಹೇಗೆ ನಿರರ್ಥಕವಾಗುತ್ತವೆ ಎಂದು. ಆದುದರಿಂದ ಅಲ್ಲಾಹನು ನಮಗೆ ದಯಪಾಲಿಸಿದ ಈ ಅನುಗ್ರಹಗಳನ್ನು ಕೃತಜ್ಞತಾಭಾವದಿಂದ ಕಾಣುವುದು ನಮಗೆ ಕಡ್ಡಾಯವಾಗಿಲ್ಲವೇ? ಅಲ್ಲಾಹನು ತನ್ನ ಅಪಾರ ಅನುಗ್ರಹದ ಮೂಲಕ ನಮಗೆ ದಯಪಾಲಿಸಿದ ಶಕ್ತಿಗಳನ್ನು ನಾವು ನಿರರ್ಥಕವಾಗಿ ಬಿಟ್ಟುಬಿಡುವುದಾದರೆ ನಿಸ್ಸಂಶಯವಾಗಿಯೂ ನಾವು ಕೃತಘ್ನರಾಗುವೆವು. ಆದುದರಿಂದ ನೀವು ನೆನಪಿಟ್ಟುಕೊಳ್ಳಿರಿ, ನೀವು ನಿಮ್ಮ ಶಕ್ತಿ ಸಾಮರ್ಥ್ಯಗಳನ್ನು ಸ್ಥಗಿತಗೊಳಿಸಿ ಪ್ರಾರ್ಥನೆ ಮಾಡುವುದಾದರೆ ನಿಮ್ಮ ಪ್ರಾರ್ಥನೆ ನಿಮಗೆ ಯಾವ ಲಾಭವನ್ನೂ ನೀಡಲಾರದು. ಏಕೆಂದರೆ ನಮಗೆ ಉಚಿತವಾಗಿ ದೊರೆತುದನ್ನು ನಾವು ಉಪಯೋಗಿಸುವುದಿಲ್ಲವಾದರೆ ಇತರ ವಸ್ತುಗಳನ್ನು ಹೇಗೆ ತಾನೆ ನಾವು ಗಳಿಸಬಲ್ಲೆವು?

ಪ್ರಾರ್ಥನೆ ಎಷ್ಟು ಸಂತೋಷದಾಯಕವಾಗಿದೆ ಎಂದರೆ ನಾನು ಯಾವ ಶಬ್ದಗಳನ್ನು ಬಳಸಿ ಅದರ ಸಂತೋಷ ಮತ್ತು ಆಸ್ವಾದನೆಯನ್ನು ಲೋಕಕ್ಕೆ ಮನವರಿಕೆ ಮಾಡಿಕೊಡಲಿ ಎಂದು ನಾನು ವಿಷಾದಿಸುತ್ತೇನೆ. ಅದನ್ನು ಅನುಭವದಿಂದ ಮಾತ್ರವೇ ಗ್ರಹಿಸಲು ಸಾಧ್ಯ. ಪ್ರಾರ್ಥನೆಯ ಆವಶ್ಯಕ ಘಟಕಗಳಲ್ಲಿ ಮೊದಲನೆಯದಾಗಿ ಸತ್ಕರ್ಮಗಳಾಗಿವೆ ಮತ್ತು ದೃಢನಂಬಿಕೆಯಾಗಿದೆ. ಯಾರು ತನ್ನ ನಂಬಿಕೆಗಳನ್ನು ಸರಿಪಡಿಸದೆ ಮತ್ತು ಸತ್ಕರ್ಮ ಮಾಡದೆ ಪ್ರಾರ್ಥಿಸುತ್ತಾನೋ ಅವನು ಅಲ್ಲಾಹನನ್ನು ಪರೀಕ್ಷಿಸುತ್ತಾನೆ.

ಅಲ್ಲಾಹನ ಸತ್ಯವಾದ ಪ್ರೀತಿಗಳಿಸಲು ಮತ್ತು ಅದರ ಫಲಸ್ವರೂಪವಾಗಿ ಅಲ್ಲಾಹನು ಪ್ರಾರ್ಥನೆಗಳನ್ನು ಆಲಿಸಿ ತನ್ನ ಸಾಮೀಪ್ಯ ಪ್ರಕಟಿಸುವಂತಾಗಲು ಮನುಷ್ಯನು ಏನು ಮಾಡಬೇಕು ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನೊಂದಿಗೆ ಪ್ರೀತಿ ಮತ್ತು ನಿಷ್ಠೆ ಹೊಂದುವುದು ಮುಖ್ಯ ಶರತ್ತಾಗಿದೆ. ಅಲ್ಲಾಹನೊಂದಿಗೆ ಪ್ರೀತಿ ಎಂತಹ ವಸ್ತುವೆಂದರೆ ಅದು ಮನುಷ್ಯನ ಕೀಳು ಜೀವನವನ್ನು ಸುಟ್ಟುಹಾಕಿ ಅವನನ್ನು ಹೊಸ ಮತ್ತು ಪರಿಶುದ್ಧ ಮನುಷ್ಯನನ್ನಾಗಿ ಮಾಡುತ್ತದೆ. ಆಗ ಅವನು ಕಾಣುವುದನ್ನು ಅವನು ಮೊದಲು ಕಂಡಿರಲಿಲ್ಲ. ಅವನು ಆಗ ಆಲಿಸುವುದನ್ನು ಮೊದಲು ಆಲಿಸುತ್ತಿರಲಿಲ್ಲ. ಒಟ್ಟಿನಲ್ಲಿ, ಅಲ್ಲಾಹನು ಮನುಷ್ಯನಿಗೆ ಸಿದ್ಧಪಡಿಸಿರುವ ತನ್ನ ಅನುಗ್ರಹಗಳ ತಟ್ಟೆಯನ್ನು ಪಡೆಯಲು ಮತ್ತು ಅದರಿಂದ ಲಾಭ ಪಡೆಯಲು ಅಲ್ಲಾಹನು ಮನುಷ್ಯನಿಗೆ ಶಕ್ತಿ ಸಾಮರ್ಥ್ಯಗಳನ್ನು ಸಹ ದಯಪಾಲಿಸಿದ್ದಾನೆ. ನಾವು ಅವುಗಳ ಉಪಯೋಗ ಮಾಡದಿದ್ದರೆ ಮತ್ತು ಅಲ್ಲಾಹನ ಕಡೆಗೆ ಹೆಜ್ಜೆ ಹಾಕದಿದ್ದರೆ ಅದೆಷ್ಟು ಸೋಮಾರಿತನ ಉದಾಸೀನತೆ ಮತ್ತು ಕೃತಘ್ನತೆ ಆಗಿದೆ.

ಅಲ್ಲಾಹನ ಬಗ್ಗೆ ಜ್ಞಾನಗಳಿಸುವ ಮಾರ್ಗಗಳು ಯಾವುವು ಎನ್ನುವುದರ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು, **''ಖುಲಿಖಲ್ ಇನ್‌ಸಾನ ಝಈಫ''** (ಮನುಷ್ಯನನ್ನು ಬಲಹೀನನಾಗಿ ಸೃಷ್ಟಿಸಲಾಗಿದೆ) ಎಂದು ಹೇಳಿದ್ದಾನೆ. ಅಲ್ಲಾಹನ ಅನುಗ್ರಹ ದೊರಕದೆ ಅವನಿಗೆ ಏನನ್ನೂ ಮಾಡಲು ಸಾಧ್ಯವಿಲ್ಲ. ಮನುಷ್ಯನ ಪಾಲನೆ ಪೋಷಣೆ ಮತ್ತು ಅವನ ಬಾಳ್ವಿಕೆ ಎಲ್ಲವೂ ಅಲ್ಲಾಹನ ಅನುಗ್ರಹವನ್ನು ಹೊಂದಿಕೊಂಡಿದೆ. ತನ್ನ ಬುದ್ಧಿ ಸಾಮರ್ಥ್ಯ ಮತ್ತು ಸಂಪತ್ತು ಬಗ್ಗೆ ಹೆಮ್ಮೆ ಪಡುವವನು ಅವಿವೇಕಿಯಾಗಿದ್ದಾನೆ. ಏಕೆಂದರೆ ಅವು ಅಲ್ಲಾಹನ ವರದಾನಗಳಾಗಿವೆ. ಮನುಷ್ಯನು ಅವುಗಳನ್ನು ಎಲ್ಲಿಂದಲೂ ತಂದಿಲ್ಲ. ಪ್ರಾರ್ಥನೆ ಮಾಡುವಾಗ

ಮನುಷ್ಯನು ತನ್ನ ಈ ಬಲಹೀನತೆ ಬಗ್ಗೆ ಪೂರ್ಣ ಶ್ರದ್ಧೆ ವಹಿಸಬೇಕಾದುದು ಅಗತ್ಯವಾಗಿದೆ. ಹೀಗೆ ಮನುಷ್ಯನು ತನ್ನ ಬಲಹೀನತೆಗಳ ಬಗ್ಗೆ ಚಿಂತಿಸುವಾಗ ಅವನಿಗೆ ಅಲ್ಲಾಹನ ಸಹಾಯದ ಆವಶ್ಯಕತೆಯ ಅರಿವು ಉಂಟಾಗುವುದು. ಆ ಮೂಲಕ ಅವನಲ್ಲಿ ಪ್ರಾರ್ಥನೆ ಮಾಡಲು ಒಂದು ಉತ್ಸಾಹ ಸೃಷ್ಟಿಯಾಗುವುದು. ಒಬ್ಬ ಮನುಷ್ಯನು ಯಾವುದಾದರೂ ವಿಪತ್ತಿಗೆ ಪಾತ್ರನಾದರೆ ದುಃಖ ಮತ್ತು ಕಷ್ಟ ಅನುಭವಿಸುತ್ತಾನೆ. ಆಗ ಅವನು ಬಹಳ ಧ್ವನಿಯೆತ್ತಿ ಬೊಬ್ಬಿಡುತ್ತಾನೆ ಮತ್ತು ಅನ್ಯರಿಂದ ಸಹಾಯವನ್ನು ಬೇಡಿಕೊಳ್ಳುತ್ತಾನೆ. ಇದೇ ರೀತಿ ಮನುಷ್ಯನು ತನ್ನ ಬಲಹೀನತೆಗಳ ಬಗ್ಗೆ ಚಿಂತಿಸಿದರೆ ಪ್ರತಿಕ್ಷಣ ತನಗೆ ಅಲ್ಲಾಹನ ಸಹಾಯದ ಆವಶ್ಯಕತೆ ಇದೆ ಎಂದು ಮನಗಾಣುವನು. ಅವನು ಅಲ್ಲಾಹನ ಸನ್ನಿಧಿಯಲ್ಲಿ ಬಿದ್ದು ಯಾರಬ್ಬ್ ಯಾರಬ್ಬ್ (ಓ ನನ್ನ ಪ್ರಭು, ಓ ನನ್ನ ಪ್ರಭು) ಎಂದು ಬೊಬ್ಬಿಡುತ್ತಾನೆ.

ನಾವು ಎಲ್ಲದಕ್ಕಿಂತಲೂ ಮುಖ್ಯವಾಗಿ ಧರ್ಮವನ್ನು ರಕ್ಷಿಸಬೇಕೆಂದು ಅಲ್ಲಾಹನನ್ನು ಪ್ರಾರ್ಥಿಸಬೇಕು. ಮನುಷ್ಯನು ಹೀಗೆ ಮಾಡಿದರೆ ಅಲ್ಲಾಹನ ಸಾಮೀಪ್ಯಗಳಿಸುವ ಬಾಗಿಲು ತೆರೆಯಲ್ಪಡುತ್ತದೆ. ಆಗ ಅವನ ಉಳಿದ ಪ್ರಾರ್ಥನೆಗಳು ತಾನಾಗಿಯೇ ಅಂಗೀಕಾರ ಪಡೆಯುತ್ತಾ ಇರುತ್ತವೆ. ಅಲ್ಲಾಹನು ತನ್ನ ಸಾಮೀಪ್ಯಗಳಿಸಲು ಮತ್ತು ಪ್ರಾರ್ಥನೆ ಅಂಗೀಕಾರವಾಗಲು ವಿವರಿಸಿರುವ ಮಾರ್ಗಗಳಲ್ಲಿ ಅತ್ಯುನ್ನತವಾದುದು ನಮಾಝ್‌ನಲ್ಲಿ ಪ್ರಾರ್ಥಿಸುವುದಾಗಿದೆ. ಇದರ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ: ನಮಾಝ್‌ನ ಮುಖ್ಯ ಉದ್ದೇಶ ಮತ್ತು ಅದರ ತಿರುಳು ಪ್ರಾರ್ಥನೆಯೇ ಆಗಿದೆ. ಪ್ರಾರ್ಥನೆ ಮಾಡುವುದು ಅಲ್ಲಾಹನ ಪ್ರಕೃತಿ ನಿಯಮಗಳಿಗೆ ಅನುಸಾರವಾಗಿಯೇ ಆಗಿದೆ. ಉದಾಹರಣೆಗೆ ನಾವು ಸಾಮಾನ್ಯವಾಗಿ ಕಾಣುತ್ತೇವೆ– ಒಂದು ಶಿಶು ಅಳುತ್ತಾ ಕೂಗುತ್ತಾ ಬೊಬ್ಬೆ ಹಾಕುವಾಗ ಅದರ ತಾಯಿ ಗಾಬರಿಗೊಂಡು ತನ್ನ ಶಿಶುವಿಗೆ ಹಾಲು ಕುಡಿಸುತ್ತಾಳೆ. ಇದೇ ರೀತಿ ದೇವನ ಮತ್ತು ದಾಸನ ಮಧ್ಯೆ ಸಂಬಂಧವಿದೆ. ಇದನ್ನು ಪ್ರತಿಯೊಬ್ಬ ಮನವರಿಕೆ ಮಾಡಲಾರನು. ಮನುಷ್ಯನು ಅಲ್ಲಾಹನ ಬಾಗಿಲಲ್ಲಿ ಬಿದ್ದುಕೊಂಡು ಅತ್ಯಂತ ವಿನಯದಿಂದಲೂ ಭಯಭಕ್ತಿಯಿಂದಲೂ ತನ್ನ ಸ್ಥಿತಿಗತಿಗಳನ್ನು ವಿವರಿಸುವಾಗ ಮತ್ತು ಆವಶ್ಯಕತೆಗಳನ್ನು ಬೇಡಿಕೊಳ್ಳುವಾಗ ಅಲ್ಲಾಹನ ಕಾರುಣ್ಯ ಉಕ್ಕಿ ಬರುತ್ತದೆ ಮತ್ತು ಅಂತಹ ಮನುಷ್ಯನ ಮೇಲೆ ದಯೆದೋರಲಾಗುತ್ತಿದೆ. ಅಲ್ಲಾಹನ ಅನುಗ್ರಹವೆಂಬ ಹಾಲು ದೊರಕಲು ಅಳುವಿಕೆಯ ಆವಶ್ಯಕತೆ ಇದೆ. ಅಲ್ಲಾಹನ ಅನುಗ್ರಹವೆಂಬ ಹಾಲನ್ನು ಕುಡಿಯಲು ಮತ್ತು ಅದರಿಂದ ಲಾಭ ಪಡೆಯಲು ಬಯಸುವುದಾದರೆ, ವಿನಯಾನ್ವಿತನಾಗಿ ಅಳುತ್ತಾ ಗೋಳಿಡಬೇಕಾದ ಆವಶ್ಯಕತೆಯಿದೆ. ಅಲ್ಲಾಹನ ಮುಂದೆ ಅಳುತ್ತಿರುವ ಕಣ್ಣುಗಳನ್ನು ಇರಿಸಬೇಕಾಗಿದೆ.

ರಮಝಾನ್ ತಿಂಗಳಲ್ಲಿ ಬಹುತೇಕ ಜನರ ಶ್ರದ್ಧೆ ಮಸ್‌ಜಿದ್ ಕಡೆಗೆ ಇರುತ್ತದೆ. ಅಲ್ಲಾಹನ ಅನುಗ್ರಹದಿಂದ ಬಾಜಮಾಅತ್ (ಸಾಮೂಹಿಕವಾಗಿ) ನಮಾಝ್ ಅನುಷ್ಠಿಸುವ ಬಗ್ಗೆ ಸಹ ಗಮನ ಹರಿಸಲಾಗುತ್ತದೆ. ಅದರೊಂದಿಗೆ ನಫ್ಲ್ ನಮಾಝ್‌ಗಳ ಬಗ್ಗೆ ಸಹ ಲಕ್ಷ್ಯ ನೀಡಬೇಕು. ಧರ್ಮಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವ ಬಗ್ಗೆ ಮತ್ತು ಅಲ್ಲಾಹನ ಸಾಮೀಪ್ಯ ಗಳಿಸುವ ಬಗ್ಗೆ ನಾವು ಆದ್ಯತೆ ನೀಡಿ ಪ್ರಾರ್ಥಿಸಬೇಕಾಗಿದೆ. ಮೊದಲನೆಯ ಪ್ರಾರ್ಥನೆ ಇವುಗಳ ಬಗ್ಗೆ ಮಾಡಬೇಕು. ಲೌಕಿಕ ವ್ಯವಹಾರಗಳ ಬಗ್ಗೆ ಪ್ರಾರ್ಥನೆ ಅನಂತರ ಬರಬೇಕಾಗಿದೆ. ನಿಮ್ಮ ಲೌಕಿಕ ಆವಶ್ಯಕತೆಗಳನ್ನು ಅಲ್ಲಾಹನು ತಾನೇ ಈಡೇರಿಸಿ ಕೊಡುವನು.

ಈಗ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ದುಆ ನಿಮ್ಮ ಮುಂದಿರಿಸುತ್ತೇನೆ. ಈ ದಿನಗಳಲ್ಲಿ ವಿಶೇಷವಾಗಿ ನಾವು ಈ ಪ್ರಾರ್ಥನೆ ಮಾಡುತ್ತಾ ಇರಬೇಕು ಆ ಮೂಲಕ ಅಲ್ಲಾಹನ ಸಾಮೀಪ್ಯ ನಮಗೆ ಲಭಿಸುವಂತಾಗಲಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ದುಆ ಮಾಡಿದರು: **ಓ ಸರ್ವಲೋಕಗಳ ಪ್ರಭು, ನಿನ್ನ ಔದಾರ್ಯಗಳ ಬಗ್ಗೆ ಕೃತಜ್ಞತೆ ಅರ್ಪಿಸಲು ನನಗೆ ಸಾಧ್ಯವಾಗಲಾರದು. ನೀನು ಅತ್ಯಂತ ದಯಾಳುವೂ ಕರುಣಾಮಯನೂ ಆಗಿರುವೆ. ನೀನು ನನಗೆ ಮಾಡಿದ ಔದಾರ್ಯಗಳು ಅಸಂಖ್ಯಾತವಾಗಿವೆ. ನನ್ನ ಪಾಪಗಳನ್ನು ಕ್ಷಮಿಸಿ ನಾನು ನಾಶವಾಗದಂತೆ ರಕ್ಷಿಸು. ನನ್ನ ಹೃದಯದಲ್ಲಿ ನಿನ್ನ ಬಗ್ಗೆ ಶುದ್ಧವಾದ ಪ್ರೇಮವನ್ನು ಹಾಕು. ಆ ಮೂಲಕ ನನಗೆ ಜೀವಿತ ಲಭಿಸುವಂತಾಗಲಿ. ನನ್ನ ತಪ್ಪುಗಳನ್ನು ಮರೆಮಾಡು. ನಿನ್ನ ಸಂಪ್ರೀತಿಗಳಿಸುವ ಕರ್ಮಗಳನ್ನು ನಾನು ಮಾಡುವಂತಾಗಲಿ. ನಾನು ನಿನ್ನ ಕಾರುಣ್ಯಮಯ ವದನದ ಅಭಯ ಯಾಚಿಸುತ್ತೇನೆ. ನನ್ನ ಮೇಲೆ ನಿನ್ನ ಕೋಪ ಎರಗದಿರಲಿ. ದಯೆದೋರು. ಇಹಲೋಕ ಮತ್ತು ಪರಲೋಕದ ವಿಪತ್ತುಗಳಿಂದ ನನ್ನನ್ನು ರಕ್ಷಿಸು. ಪ್ರತಿಯೊಂದು ಅನುಗ್ರಹವೂ ನಿನ್ನಿಂದಲೇ ದೊರಕುತ್ತದೆ – ಆಮೀನ್ ಸುಮ್ಮ ಆಮೀನ್.**

ನಾವು ಪ್ರಾರ್ಥನೆಗಳ ವಾಸ್ತವಿಕತೆಯನ್ನು ಅರಿಯುವಂತೆ ಅಲ್ಲಾಹನು ನಮಗೆ ಅನುಗ್ರಹ ನೀಡಲಿ. ಈ ರಮಝಾನ್ ತಿಂಗಳು ನಮ್ಮನ್ನು ಅಲ್ಲಾಹನ ಬಗ್ಗೆ ದೃಢ ವಿಶ್ವಾಸ ಹೊಂದಿ ಅದರಲ್ಲಿ ಸ್ಥಿರವಾಗಿರುವವರೊಂದಿಗೆ ಸೇರಿಸುವಂತಾಗಲಿ. ನಮ್ಮ ಕರ್ಮಗಳು ಅಲ್ಲಾಹನ ಸಂಪ್ರೀತಿಗೆ ಅನುಸಾರವಾಗಿರುವಂತಾಗಲಿ. ನಮ್ಮ ವಿಶ್ವಾಸ ಹಿಂದೆಗಿಂತ ಹೆಚ್ಚು ಬಲಶಾಲಿಯಾಗಲಿ. ನಮ್ಮಲ್ಲಿ ಅಲ್ಲಾಹನ ಬಗ್ಗೆ ನಿಜವಾದ ಪ್ರೀತಿ ಹುಟ್ಟಲಿ. ಅಲ್ಲಾಹನು ನಮ್ಮನ್ನು ಇಹಲೋಕದ ಮತ್ತು ಪರಲೋಕದ ವಿಪತ್ತುಗಳಿಂದ ರಕ್ಷಿಸುವವನಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis** (atba)*

*at Masjid Baithul Futhuh, London on 17-06-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

**Email**: *khutuba.kannada@gmail.com*

**You can find all the Sermons archived at**: www.alislam.org/friday-sermon